ಇ) ಹಾಗಿದ್ದಲ್ಲಿ, ಈ ಕಾರ್ಯವನ್ನು ಯಾವಾಗ ಮುಗಿಸಿ ರೈತರ ಉಪಯೋಗಕ್ಕೆ ಅನುವು ಮಾಡಲಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು). —

ಅ) ಬಂದಿದೆ.

ಆ) ಹೌದು.

ಇ) ಯೋಜನೆಯ ವರದಿಗೆ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಪೂರ್ವಭಾವಿ ಪರಿಶೀಲನೆ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ ಮತ್ತು ಜಂಬದಹಳ್ಳ ಜಲಾಶಯಕ್ಕೆ ಹೋದಿರಾಯನಹಳ್ಳದಿಂದ ಬೇಕಾದಷ್ಟು ನೀರು ಬಂದರೆ, ರೈತರಿಗೆ ಅನುಕೂಲವಾಗುತ್ತದೆ. ಪೂರ್ಣ ಅನುಕೂಲ ಆಗಬೇಕಾದರೆ, ಡೈವರ್ಷನ್ ಸ್ಕೀಂ ಆಗಬೇಕು. ಡೈವರ್ಷನ್ ಸ್ಕೀಂ ಆದರೆ ಸುಮಾರು ಒಂದು ಸಾವಿರ ಎಕರೆ ನೀರಾವರಿ ಆಗುತ್ತದೆ ಎಂದು ತಿಳಿದು ಬಂದಿದೆ. ಎಲ್ಲಾ ವರದಿಗಳು ಇದಕ್ಕೆ ಅನುಕೂಲಕರವಾಗಿ ಬಂದಿವೆ. ಹೋದ ವರ್ಷ ಎಂದರೆ ೧೯೮೪-೮೫ರಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಇದನ್ನು ಬಜೆಟ್‌ನಲ್ಲಿ ಸೇರಿಸಿದ್ದರು. ಅದೇ ರೀತಿ ಇದನ್ನು ಈ ವರ್ಷದ ಬಜೆಟ್‌ನಲ್ಲೂ ಸೇರಿಸಬೇಕಾಗಿತ್ತು. ಈ ಕಾರ್ಯವನ್ನು ತಾವು ತೆಗೆದುಕೊಂಡರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು.—ಸಂಕ್ಷಿಪ್ತವಾಗಿ ಕೇಳಿರಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಈ ವರ್ಷ ಆಯವ್ಯಯದಲ್ಲಿ ಈ ಜಂಬದಹಳ್ಳ ಜಲಾಶಯ ಯೋಜನೆಯನ್ನು, ಎಂದರೆ ಹೋದಿರಾಯನ ಹಳ್ಳ ಡೈವರ್ಷನ್ ಸ್ಕೀಂನ್ನು ಸೇರಿಸಿ, ಕೆಲಸ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ —ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಮೊದಲನೆಯ ಪ್ರಶ್ನೆಗೆ ಬಂದಿದೆ ಎಂದು ತಿಳಿಸಿದ್ದಾರೆ. ಮತ್ತು ಜಂಬದಹಳ್ಳಿ ಜಲಾಶಯದಿಂದ ಅರ್ಧ ಭಾಗದಷ್ಟು ನೀರು ಬಂದು ರೈತರಿಗೆ ಅನುಕೂಲವಾಗುತ್ತಿದೆ. ಪೂರ್ಣವಾಗಿ ಅನುಕೂಲವಾಗಬೇಕಾದರೆ ಹೋದಿರಾಯನಹಳ್ಳದಿಂದ, ಬರತಕ್ಕ ನೀರನ್ನು ಡೈವರ್ಷನ್ ಮಾಡಿದರೆ ಒಂದು ಸಾವಿರ ಎಕರೆ ನೀರಾವರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಎಲ್ಲಾ ವರದಿಗಳು ಅನುಕೂಲಕರವಾಗಿ ಬಂದಿವೆ. ಹೋದವರ್ಷ ಅಂದರೆ ೮೪-೮೫ನೇ ಸಾಲಿನಲ್ಲಿ ಒಂದು ಲಕ್ಷ ಹಣವನ್ನು ಇದಕ್ಕಾಗಿ ಇಡಲಾಗಿತ್ತು. ಅದೇರೀತಿ ಈ ವರ್ಷವೂ ಕೂಡ ಬಜೆಟ್‌ನಲ್ಲಿ ಸೇರಿಸಿ, ಈ ಕಾರ್ಯವನ್ನು ಪೂರ್ಣ ಮಾಡಿದಲ್ಲಿ ಅನುಕೂಲವಾಗುತ್ತದೆಂದೂ ಹೇಳುತ್ತೇನೆ.

ಅಧ್ಯಕ್ಷರು.—ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಬಿ. ಆರ್. ನೀಲಕಂಠಪ್ಪ —ಬಂದಿರತಕ್ಕ ವರದಿಗಳು ಪೂರ್ಣವಾಗಿ ಅನುಕೂಲಕರವಾಗಿ ಬಂದಿವೆ. ಈ ವರ್ಷದ ಆಯವ್ಯಯದಲ್ಲಿ ಸೇರಿಸಬೇಕು. ಜಂಬದಹಳ್ಳಿ ಜಲಾಶಯಕ್ಕೆ, ಬದಿರಾಯನಹಳ್ಳದಿಂದ ಡೈವರ್ಷನ್ ಮಾಡುವ ಕೆಲಸ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಹೇಳಿರುವುದೆಲ್ಲಾ ಸರಿ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶಿಕಾರಿಪುರ ತಾಲ್ಲೂಕಿನಲ್ಲಿರುವ ಚೆಕ್ ಪೋಸ್ಟ್‌ಗಳು

೬೧೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಈ ಹಿಂದೆ ಇದ್ದ ಚೆಕ್‌ಪೋಸ್ಟ್‌ಗಳೆಷ್ಟು? ಹಾಲಿ ಇರುವುದೆಷ್ಟು?

ಆ) ಶಿಕಾರಿಪುರ ತಾಲ್ಲೂಕಿನಲ್ಲಿ ಹೆಚ್ಚು ಗಂಧದ ಕಳ್ಳಸಾಗಣಿಕೆ ನಡೆಯುತ್ತಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ?

ಇ) ಅಲ್ಲಿಯ ಅರಣ್ಯಾಧಿಕಾರಿಗಳು ಇಂತಹ ಕಳ್ಳಸಾಗಾಣಿಕೆದಾರರನ್ನು ಲಾರಿಯ ಸಮೇತ ಹಿಡಿದು ಮೊಕದ್ದಮೆಗಳನ್ನು ಹಾಕಿದ್ದರೂ ತಕ್ಷಣ ಜಾಮೀನಿನ ಮೇಲೆ ಬಿಡುಗಡೆ ಹೊಂದುತ್ತಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ?

ಈ) ಈ ಕಳ್ಳಸಾಗಾಣಿಕೆ ನಿಲ್ಲಿಸಲು ಸರ್ಕಾರದವರು ವಿಶೇಷ ಯೋಜನೆ ಏನಾದರೂ ಹಾಕಿ ಕೊಂಡಿದ್ದಾರೆಯೇ?

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಆ) ಈ ಹಿಂದೆ ಅಧಿಸೂಚಿಸಿದ ಒಂದೇ ಒಂದು ಚೆಕ್‌ಪೋಸ್ಟ್ ಇದ್ದು ಇದಕ್ಕೆ ಸೇರಿದಂತೆ ಇನ್ನೂ ೩ ತಾತ್ಕಾಲಿಕ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ.

ಆ) ಗಮನಕ್ಕೆ ಬಂದಿದೆ.

ಇ) ಹೌದು. ಬಹಳ ಪ್ರಕರಣಗಳಲ್ಲಿ ನ್ಯಾಯಾಲಯವು ಬಿಡುಗಡೆಗೆ ಆದೇಶ ನೀಡುತ್ತಿದೆ.

ಈ) ಹೌದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಕಳ್ಳ ಸಾಗಾಣಿಕೆ ಎಷ್ಟು ಆಗುತ್ತಿದೆ, ಇದಕ್ಕೆ ವಿಶೇಷವಾದ ವ್ಯವಸ್ಥೆಯನ್ನು ಏನಾದರೂ ಮಾಡಿದ್ದೀರಾ? ಅಲ್ಲದೆ ಉಡುಗಣಿ, ಚುಚ್ಚುಗುಂಡಿ, ನಳಿನಕೊಪ್ಪ ಮುಂತಾದ ಗ್ರಾಮಗಳಲ್ಲಿ ಬಹಳ ಜನ ಕಳ್ಳಸಾಗಾಣಿಕೆಯಲ್ಲಿ ತೊಡಗಿದ್ದಾರೆ. ಇದರ ಬಗ್ಗೆ ವಿಶೇಷವಾಗಿ ಗಮನಕೊಟ್ಟು ವಿಶೇಷ ದಳವನ್ನು ನೇಮಕ ಮಾಡಿದರೆ, ಈ ಕಳ್ಳಸಾಗಾಣಿಕೆ ನಿಂತು ಹೋಗುತ್ತದೆ. ಇದನ್ನು ನಿಸ್ಸಂಕೋಚವಾಗಿ ಕಾರ್ಯಾಚರಣೆಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎ.ಜೀವಿಜಯ.—ಮಾನ್ಯ ಅಧ್ಯಕ್ಷರೇ, ಈಗ ಸಂಂಕದ ಕೊಪ್ಪದಲ್ಲಿ ಒಂದು ಚೆಕ್ ಪೋಸ್ಟ್ ಇದೆ. ಅದರ ಜೊತೆಗೆ ಹಾರಗುಪ್ಪ, ತಡಗುಂಡಿ, ತೊಗರ್ಸಿ ಗ್ರಾಮಗಳಲ್ಲಿಕೂಡ, ತಾತ್ಕಾಲಿಕವಾಗಿ ಚೆಕ್ ಪೋಸ್ಟ್‌ಗಳನ್ನು ಮಾಡಿದ್ದೇವೆ. ಮತ್ತು ಶಿಕಾರಿಪುರದಲ್ಲಿ ವಿಶೇಷ ಅರಣ್ಯ ಸಂಚಾರಿ ದಳವನ್ನು ಸ್ಥಾಪಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿರುವ ಜಾಗದಲ್ಲೂ ಕೂಡ ಚೆಕ್ ಪೋಸ್ಟ್ ಸ್ಥಾಪನೆ ಮಾಡಲಿಕ್ಕೆ ಪ್ರಯತ್ನ ಮಾಡಲಾಗುವುದು. ಶಿವಮೊಗ್ಗದಲ್ಲಿ ಇರುವಂತಹ ವೈರ್‌ಲೆಸ್ ವ್ಯವಸ್ಥೆಯನ್ನು ಎಲ್ಲಾ ಕಡೆಗೂ ವಿಸ್ತರಿಸುವುದಕ್ಕೆ ಕಾರ್ಯಕ್ರಮ ಹಾಕಿದ್ದೇವೆ. ಸದಸ್ಯರು ಹೇಳಿದಂತೆ ಹೆಚ್ಚಿನ ಮಟ್ಟಿಗೆ ಕಳ್ಳಸಾಗಾಣಿಕೆ ಆಗುತ್ತಿದೆಯೆಂದು, ಆಂಕಿಅಂಶಗಳನ್ನು ಕ್ಷೋಟ್ಟು ಹೇಳಿದಾಗಲೇ, ಸಾಕಷ್ಟು ಕಳ್ಳಸಾಗಾಣಿಕೆ ದಾರರನ್ನು ನಾವು ಹಿಡಿದಿದ್ದೇವೆ. ಸಾಗರ ತಾಲ್ಲೂಕಿನಲ್ಲಿ ೭,೫೬೫ ಕೆ. ಜಿ. ಗಂಧವನ್ನು ಸ್ವಾಧೀನ ಮಾಡಿ ಕೊಂಡು, ೬ಟ್ಟು ೭ ಲಾರಿಗಳನ್ನು ಶಿಕಾರಿಪುರದಲ್ಲಿಯೇ ಸೀಜ್ ಮಾಡಿದ್ದೇವೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನಂ ಈಗಾಗಲೇ ಹೇಳಿರುವ ಜಾಗಗಳಲ್ಲಿ ಹಗಲು ಹೊತ್ತಿನಲ್ಲಿಯೇ ಕಳ್ಳತನವಾಗುತ್ತಿದೆ. ಈ ನಾಲ್ಕು ಗ್ರಾಮಗಳನ್ನು ವಿಶೇಷವಾಗಿ ತಮ್ಮ ಗಮನಕ್ಕೆ ತೆಗೆದುಕೊಂಡಂ ಈ ಕಳ್ಳಸಾಗಾಣಿಕೆಯನ್ನು ನಿಲ್ಲಿಸುತ್ತೀರಾ?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಸದಸ್ಯರು ಸೂಚನೆ ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತಂ.

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ, ನನ್ನ ತಡೆಹಿಡಿದಿರುವ ಪ್ರಶ್ನೆಯಂನ್ನು ತಮ್ಮ ಮುಖಾಂತರ ಕೇಳುತ್ತೇನೆ.....

ಅಧ್ಯಕ್ಷರು.—ಈಗ ಅವಕಾಶ ಕೊಡುವುದಕ್ಕಾಗುವುದಿಲ್ಲ, ತಾವು ದಯಮಾಡಿ ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು.—ನಾವು ನಮ್ಮ ಪ್ರಶ್ನೆಗಳನ್ನು ಸದನದಲ್ಲಿ ಕೇಳಬೇಕಾಗುತ್ತದೆ. ಸದಸ್ಯರ ಬಗ್ಗೆ ತಾವು ಕಾಳಜಿ ವಹಿಸಬೇಕಾಗುತ್ತದೆ.....

ಅಧ್ಯಕ್ಷರು.—ತಾವು ದಯಮಾಡಿ ಈಗ ಕುಳಿತುಕೊಳ್ಳಿ.